# ಮಂಗಳೂರು ವಿಶ್ವವಿದ್ಯಾನಿಲಯ

ಸಂಖ್ಯೆ: ಎಂಯು/ಆರ್ ಇಜಿ/ಎಸ್ಸಿಎಸ್ಟಿ(ಎಸ್ ಸಿಟಿ)/47/2021

ಕುಲಸಚಿವರ ಕಚೇರಿ
ಮಂಗಳಗಂಗೋತ್ರಿ – 574 199
ದಿನಾಂಕ: 21.10.2021

## ಸುತ್ತೋಲೆ

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 2020–21ನೇ ಸಾಲಿನ SC/ST ಸಂಶೋಧನಾ ವಿದ್ಯಾರ್ಥಿಗಳಿಗೆ Ph.D. ಶಿಷ್ಯವೇತನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

********

2020–21ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗ/ಕೇಂದ್ರ ಮತ್ತು ಘಟಕ ಕಾಲೇಜುಗಳಲ್ಲಿ Ph.D. ವ್ಯಾಸಂಗಕ್ಕೆ ಸೇರ್ಪಡೆಗೊಂಡಿರುವ ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳಿಂದ Ph.D. ಸಂಶೋಧನಾ ಶಿಷ್ಯವೇತನಕ್ಕೆ ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ನಮೂನೆಗಳನ್ನು www.mangaloreuniversity.ac.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳು/ಸ್ನಾತಕೋತ್ತರ ಕೇಂದ್ರ/ಘಟಕ ಕಾಲೇಜುಗಳಲ್ಲಿ ಪೂರ್ಣಕಾಲಿಕ ನೆಲೆಯಲ್ಲಿ Ph.D. ಕೋರ್ಸಿಗೆ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳು ಮಾತ್ರ ಈ ಶಿಷ್ಯವೇತನಕ್ಕೆ ಅರ್ಹರಾಗಿರುತ್ತಾರೆ. ಸಂಶೋಧನಾ ಶಿಷ್ಯವೇತನಕ್ಕೆ ಆಯ್ಕೆಯಾದ ಅಭ್ಯರ್ಥಿಗಳಿಗೆ 3+2 ವರ್ಷದ ಅವಧಿಗೆ ಅಥವಾ ಮಹಾಪ್ರಬಂಧ ಸಲ್ಲಿಕೆ ಯಾವುದು ಮೊದಲು ಸಂಭವಿಸುತ್ತದೋ ಅಲ್ಲಿಯವರೆಗೆ ಈ ಕೆಳಗಿನ ದರದಂತೆ ಶಿಷ್ಯವೇತನ ನೀಡಲಾಗುತ್ತದೆ.

| Sl.No | Rate of Fellowship Rs. | Rate of an annual contingency Rs. |
|---|---|---|
| 1. | Junior Research Fellowship (First Two Years) Rs.15000/- per month | 15,000.00 (Arts and Commerce Faculty) |
| 2. | Senior Research Fellowship (After Two Years) Rs.17000/- per month | 17,000.00 (For Science Faculty) |

ಅರ್ಹ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯನ್ನು ಸ್ನಾತಕೋತ್ತರ ಪದವಿ, ಎಸ್.ಎಸ್.ಎಲ್.ಸಿ. ಅಂಕಪಟ್ಟಿ, RD ನಂಬರ್ ಹೊಂದಿರುವ ಜಾತಿ ಪ್ರಮಾಣ ಪತ್ರ ಮತ್ತು ಆದಾಯ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿ ಹಾಗೂ ರೂ.100/–ನ್ನು ಪಾವತಿಸಿದ ಬ್ಯಾಂಕ್ ಡಿ.ಡಿ/ ಚಲನ್‌ನ ಪ್ರತಿಯೊಂದಿಗೆ ಮಾರ್ಗದರ್ಶಕರು/ವಿಭಾಗದ ಮುಖ್ಯಸ್ಥರ ಮೂಲಕ **ದಿನಾಂಕ: 30.10.2021ರೊಳಗೆ** ಮಾನ್ಯ ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ, ಆಡಳಿತ ಸೌಧ, ಮಂಗಳಗಂಗೋತ್ರಿ–574199 ಇವರಿಗೆ ಸಲ್ಲಿಸುವುದು.

**ಸೂಚನೆ: ಹೊರ ರಾಜ್ಯಗಳ ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳು ಹಾಗೂ ಅಂಶ–ಕಾಲಿಕ ನೆಲೆಯಲ್ಲಿ ಪ್ರವೇಶಾತಿ ಪಡೆದಿರುವ ಅಭ್ಯರ್ಥಿಗಳು ಈ ಶಿಷ್ಯವೇತನವನ್ನು ಪಡೆಯಲು ಅರ್ಹರಾಗಿರುವುದಿಲ್ಲ. ಜಾತಿ ಸ್ಥಾನಮಾನದ ಬಗ್ಗೆ ಸುಳ್ಳು ಮಾಹಿತಿ ನೀಡಿರುವುದು ಅಥವಾ ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಸಲ್ಲಿಸಿರುವುದು ಕಂಡು ಬಂದಲ್ಲಿ ಶಿಷ್ಯವೇತನ ರದ್ದುಪಡಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು.ಹೆಚ್ಚಿನ ಮಾಹಿತಿಗಾಗಿ ಪರಿಶಿಷ್ಟ ಜಾತಿ/ಪಂಗಡ ಘಟಕದ ವಿಶೇಷಾಧಿಕಾರಿಯವರನ್ನು ಸಂಪರ್ಕಿಸುವುದು. (ದೂರವಾಣಿ 0824–2287233/2287547)**

21/10/21
ಕುಲಸಚಿವರ ಪರವಾಗಿ